**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ.ನಂಃ 10004/2024**

**ಚಾಸಾ ಃ 7**

**ಪ್ರಾಸಾ ಃ 9**

| | | |
|---|---|---|
| **ಹೆಸರು** | ಃ | ಆಶೀರ್ವಾದ |
| **ತಂದೆ ಹೆಸರು** | ಃ | ಮೂರ್ತಿ ಅಲಿಯಾಸ್ ಜಾನ್ ಮೂರ್ತಿ |
| **ವಯಸ್ಸು** | ಃ | 24 ವರ್ಷ |
| **ವೃತ್ತಿ** | ಃ | ಖಾಸಗಿ ಕೆಲಸ |
| **ವಾಸ** | ಃ | ಬೀರಸಂದ್ರ, ದೇವನಹಳ್ಳಿ |

**ಈ ದಿನ ದಿನಾಂಕಃ 12-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

1. ಆರೋಪಿತರು ಗೊತ್ತಿರುತ್ತಾರೆ ಮತ್ತು ಅವರನ್ನು ನೋಡಿರುತ್ತೇನೆ. ಆರೋಪಿತರ ತಂದೆ ಚಾಸಾ 2 ಮರಿಯಾದಾಸ್ ಮತ್ತು ತಾಯಿ ಚಾಸಾ 3 ಶ್ರೀಮತಿ ಸಲೀನ್ ಮೇರಿ ಗೊತ್ತಿರುತ್ತಾರೆ. ಆರೋಪಿಯ ಹೆಂಡತಿ ಜಲೀನಾ ಜೋಬಿ ಸಹ ಗೊತ್ತಿರುತ್ತಾರೆ. ಚಾಸಾ 6 ಹಮಿದಾ ಬಾನು ಸಹ ಗೊತ್ತಿರುತ್ತಾರೆ. ಆರೋಪಿಯ ಹೆಂಡತಿ ಜಲೀನಾ ಜೋಬಿಯವರು ತೀರಿಕೊಂಡ ವಿಚಾರ ಮರುದಿನ ನ್ಯೂಸ್ ಮೂಲಕ ಗೊತ್ತಾಗಿರುತ್ತದ ಆದರೆ ಹೇಗೆ ತೀರಿಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಿಸಿದ್ದು ನಾನು ಹೇಳಿಕೆ ನೀಡಿರುತ್ತೇನೆ.

**( ಈ ಹಂತದಲ್ಲಿ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷಿ ನುಡಿದಿದ್ದರಿಂದ ವಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ವಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

**1.** ಸ್ಯಾಮ್ ಮರಿಯಾ ದಾಸ್ ಮತ್ತು ಹಮಿದಾ ಅವರು ಹೆಚ್ಚಿನ ಸಲುಗೆಯಿಂದ ಇದ್ದು ಅವರು ಪ್ರೀತಿ ಮಾಡುತ್ತಿದ್ದರು ಎಂದು ಮತ್ತು ಮದುವೆ ಮಾಡಿಕೊಳ್ಳಲು ತೀರ್ಮಾನಿಸಿದ್ದರು ಎಂದು ಆದರೆ ಅವರಿಬ್ಬರ ಧರ್ಮ ಬೇರೆ ಬೇರೆ ಆಗಿದ್ದರಿಂದ ಹಮಿದಾ ಅವರನ್ನು ಮದುವೆಯಾಗಲು ಸ್ಯಾಮ್ ಮರಿಯಾದಾಸ್ ಅವರ ತಂದೆ ತಾಯಿಗಳು ಒಪ್ಪಿ ರಲಿಲ್ಲವೆಂದು ಆದರೂ ಸಹ ಅವರಿಬ್ಬರು ಪೋನ್ ಮೂಲಕ ಮಾತನಾಡುತ್ತಿದರು ಎಂದು ನಾನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ ಸದರಿ ಹೇಳಿಕೆಯ ಅಂಶವನ್ನು ನಿಪಿ 21(1) ಎಂದು ಗುರುತಿಸಲಾಯಿತು.

**ಎಸ್.ಸಿ.ನಂಃ 10004/2024**

**ಪ್ರಾಸಾ ಃ 9**

2. ಸ್ಯಾಮ್ ಮರಿಯಾದಾಸನು ತನ್ನ ಮದುವೆಯ ನಂತರವೂ ಸಹ ಹಮಿದಾ ಅವರರೊಂದಿಗೆ ಸಲುಗೆಯಾಗಿ ಇರುವುದನ್ನು ಮತ್ತು ಮಾತನಾಡುವುದನ್ನು ಅವನ ಹೆಂಡತಿ ಜಲೀನಾ ಜೋಬಿ ವಿರೋಧಿಸುತ್ತಿದ್ದಳು ಎಂದು ಸ್ಯಾಮ್ ಮರಿಯಾದಾಸ್ನು ನನಗೆ ಹೇಳಿರುತ್ತಾನೆ ಎಂದು ಆ ನಂತರವೂ ಸಹ ಸ್ಯಾಮ್ ಮರಿಯಾದಾಸ್ ಮತ್ತು ಹಮಿದಾ ಅವರು ಸಲುಗೆಯಿಂದ ಇದ್ದು ಸಂಬಂಧವನ್ನು ಮುಂದುವರೆಸಿದ್ದರು ಎಂದು ಮತ್ತು ಜಲೀಲಾ ಜೋಬಿಯನ್ನು ಮದುವೆಯಾಗಲು ಇಷ್ಟ ಇರಲಿಲ್ಲ ಎಂದು ಮತ್ತು ಈ ವಿಚಾರವಾಗಿ ಗಂಡ ಹೆಂಡತಿಯರಲ್ಲಿ ಜಗಳ ಆಗುತ್ತಿತ್ತು ಎಂದು ಸ್ಯಾಮ್ ಮರಿಯಾದಾಸ್ ನು ನನಗೆ ಹೇಳಿದ್ದನು ಎಂದು ನಾನು ಪೋಲಿಸರಲ್ಲಿ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಅಂಶವನ್ನು ನಿಪಿ 21(2) ಎಂದು ಗುರುತಿಸಲಾಯಿತು.

**3.** ನಂತರ ಸ್ಯಾಮ್ ಮರಿಯಾದಾಸ್ನು ತನ್ನ ಹೆಂಡತಿಯನ್ನು ಕೊಲೆ ಮಾಡಿದ ವಿಚಾರವನ್ನು ನನ್ನ ಸ್ನೇಹಿತನ ಮೂಲಕ ತಿಳಿದುಬಂದಿರುತ್ತದೆ ಎಂದು ಮತ್ತು ಆ ಬಗ್ಗೆ ನಾನು ವಿಚಾರಿಸಿದಾಗ ಆರೋಪಿಯು ತನ್ನ ಹೆಂಡತಿ ಜಲೀನಾ ಜೋಬಿಯನ್ನು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿ ಬಿಡಿಸಲು ಬಂದ ತನ್ನ ತಂದೆ ತಾಯಿಗಳನ್ನು ಸಹ ಕೊಲೆ ಮಾಡಲು ಪ್ರಯತ್ನಿಸಿರುತ್ತಾನೆ ಎಂದು ಮತ್ತು ಗಾಯಗೊಂಡ ಜಲೀನಾ ಜೋಬಿಯನ್ನು ಅವರ ಅತ್ತೆ ಮಾವ ಚಿಕಿತ್ಸೆಗಾಗಿ ಬಾಶೆಟ್ಟಿಹಳ್ಳಿಯ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಹೆಚ್ಚಿ ನ ಚಿಕಿತ್ಸೆಗಾಗಿ ಹೆಬ್ಬಾಳದ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ದಿನಾಂಕಃ 12-04-2022 ರ ಬೆಳಗಿನ ಜಾವ 04.09 ಗಂಟೆಯಲ್ಲಿ ದಾರಿ ಮಧ್ಯೆ ಮೃತಪಟ್ಟಿರುತ್ತಾರೆ ಎಂದು ತಿಳಿಯಿತು ಎಂದು ಮತ್ತು ಸದರಿ ಸ್ಯಾಮ್ ಮರಿಯಾದಾಸ್ ಗೆ ತನ್ನ ಹೆಂಡತಿ ಜಲೀನಾ ಜೋಬಿಯೊಂದಿಗೆ ಸಂಸಾರ ಮಾಡಲು ಇಷ್ಟ ಇಲ್ಲದ ಕಾರಣ ಸದರಿ ಜಲೀನಾ ಜೋಬಿಯನ್ನು ಕೊಲೆ ಮಾಡಿದರು ಹಮಿದಾಳನ್ನು ಮದುವೆ ಮಾಡಿಕೊಳ್ಳಬಹುದೆಂದು ತನ್ನ ಹೆಂಡತಿ ಜಲೀನಾ ಜೋಬಿಯನ್ನು ಚಾಕುವಿನಿಂದ ಚುಚ್ಚಿ  ಕೊಲೆ ಮಾಡಿರುತ್ತಾನೆ ಎಂದು ವಿಚಾರವು ನನಗೆ ಗೊತ್ತಾಯಿತು ಎಂದು ನಾನು ಪೋಲಿಸರಲ್ಲಿ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಅಂಶವನ್ನು ನಿಪಿ 21(3) ಎಂದು ಗುರುತಿಸಲಾಯಿತು.

**4.** ನಾನು ಮೇಲೆ ಹೇಳಿದ ಹೇಳಿಕೆಯನ್ನು ಪೋಲಿಸರಲ್ಲಿ ತಿಳಿಸಿದ್ದರೂ ಸಹ ಆರೋಪಿ ನನ್ನ ಸ್ನೇಹಿತರಾಗಿದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲವೆಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ